# ಬೆಳ್ಳಿಚುಕ್ಕಿಗೆ ಹಂಬಲಿಸುತ್ತ ರೆಕ್ಕೆ ಬಿಚ್ಚಿದ ಹಕ್ಕಿ

ಲಾರ್ಸ್‌ರ ತಾಯಿ ಲಾರಾ ನನ್ನ ಜೀವನದ ಒಂದು ವಿಚಿತ್ರ ಆದರೆ ಸುಂದರ ಪಾರ್ಶ್ವವಾಗಿದ್ದರು. ಅವರ ಬಗ್ಗೆ ನನ್ನ ಮನಸ್ಸಿನಲ್ಲಿ ಮಿಶ್ರಿತ ಭಾವನೆಗಳು ಮೂಡುತ್ತಿದ್ದವು. ಅವರು ಕೆಟ್ಟ ಮಹಿಳೆಯಾಗಿರಲಿಲ್ಲ. ಆದರೆ ಅವರನ್ನು ಅರ್ಥ ಮಾಡಿಕೊಳ್ಳುವ ಆವಶ್ಯಕತೆಯಿತ್ತು. ಡೆನ್ಮಾರ್ಕ್‌ನಲ್ಲಿ ಯಾರೂ ಯಾರ ಮನೆಗೆ ಮುಖವೆತ್ತಿಕೊಂಡು ಹೋಗುವುದಿಲ್ಲ, ಅಲ್ಲದೆ ಮನೆಗಳಿಗೆ ಹೋಗುವ ಪದ್ಧತಿ ಸಹ ವಿರಳವೇ ಎಂದು ನನಗೆ ಅನ್ನಿಸಿತ್ತು. ಜನ ಕೆಫೆ ಮತ್ತು ರೆಸ್ಟೋರೆಂಟ್‌ಗಳಲ್ಲಿ ಭೇಟಿಯಾಗುವುದು ಸಾಮಾನ್ಯ.

ತದನಂತರದಲ್ಲಿ ಲಾರಾ ನನ್ನ ಗೆಳತಿಯಂತಾದರು. ಪ್ರತಿ ವಾರ ನಾವು ಒಂದು ರೆಸ್ಟೋರೆಂಟಿನಲ್ಲಿ ಭೇಟಿಯಾಗಿ ಕಾಫಿಯನ್ನು ಕುಡಿಯುತ್ತಿದ್ದೆವು, ಕೇಕ್ ತಿನ್ನುತ್ತಿದ್ದವು. ಒಮ್ಮೊಮ್ಮೆ ಪಿಕ್ಚರ್ ಅಥವಾ ಥಿಯೇಟರ್ ಶೋ ನೋಡುತ್ತಿದ್ದೆವು. ಒಮ್ಮೆ ಅವರು ದುಡ್ಡು ಕೊಡುತ್ತಿದ್ದರು, ಇನ್ನೊಮ್ಮೆ ನಾನು ಕೊಡುತ್ತಿದ್ದೆ. ಅದೂ ಫಿಫ್ಟಿ ಫಿಫ್ಟಿ. ಇದೇನು? ಇಷ್ಟು ಅಳೆದು ಬದುಕುವುದು! ನಾನೇ ಉದಾರತೆಯನ್ನು ತಾಳಿ ನನ್ನ ಪರ್ಸ್ ತೆರೆಯುತ್ತಿದ್ದೆ. ಕಾರ್ಡ್ ತೆಗೆಯಬೇಕೆಂದಿರುವಾಗ ಅವರು ನನ್ನನ್ನು ತಡೆಯುತ್ತಾ ಕಠಿಣವಾಗಿ ಹೇಳುತ್ತಿದ್ದರು, 'ಬೇಡ, ಕಳೆದ ಬಾರಿ ನೀನು ಕೊಟ್ಟಿದ್ದೆ, ಇಂದು ನನ್ನ ಸರದಿ.'

ನಾನು ನನ್ನ ಪರ್ಸ್ ತೆಗೆಯುವುದನ್ನು ಮರೆತರೆ ಅವರು ನೆನಪಿಸಲು ಹಿಂಜರಿಯುತ್ತಿರಲಿಲ್ಲ, 'ನ್ಯಾನ್ಸಿ, ಪೇಮೆಂಟ್ ಮಾಡಿಬಿಡು, ಈಗ ನಿನ್ನ ಸರದಿ.' ಪಕ್ಕಾ ಲೆಕ್ಕ! ಒಂದು ಪೈಸೆ ಆ ಕಡೆಯೂ ಹೋಗಬಾರದು, ಈ ಕಡೆಯೂ ಬರಬಾರದು.

ಈ ಭೇಟಿಗಳಲ್ಲಿ ಅವರು ತಮ್ಮ ಜೀವನಕ್ಕೆ ಸಂಬಂಧಿಸಿದ ಅನೇಕ ಕಥೆಗಳನ್ನು ನನಗೆ ಹೇಳುತ್ತಿದ್ದರು. ನಾನು ಅವರ ಪ್ರಭಾವಕ್ಕೊಳಗಾಗುತ್ತಿದ್ದೆ. ಅವರು ರಾಯಲ್ ಕೋಪನ್‌ಹೇಗನ್‌ನಲ್ಲಿ ಸೆರಾಮಿಕ್ ಡಿಸೈನ್‌ನ ಪೇಂಟಿಂಗ್ ಮಾಡುತ್ತಿದ್ದರು. ಕೆಲಸ ಸೂಕ್ಷ್ಮವಾಗಿತ್ತು, ಕಣ್ಣುಗಳು ದುರ್ಬಲವಾದ್ದರಿಂದ ಅವರು ಈ ಕೆಲಸವನ್ನು ಬಿಡಬೇಕಾಯಿತು. ಅವರು ಅವಧಿಗೂ ಮೊದಲೇ ಸ್ವಯಂ ನಿವೃತ್ತಿಯನ್ನು ತೆಗೆದುಕೊಂಡಿದ್ದರು. ಲಾರಾರ ಕಲಾತ್ಮಕ ಕೌಶಲ್ಯ ಅವರ ನಡೆನುಡಿಯಲ್ಲಿ ಕಾಣಬರುತ್ತಿತ್ತು. ಅವರ ಮನೆಯ ಅಚ್ಚುಕಟ್ಟು, ಅವರ ಉಡುಪು ಎಲ್ಲದರಲ್ಲೂ ಒಂದು ವಿಧದ ಕ್ಲಾಸಿಕ್ ಟೇಸ್ಟ್ ಎದ್ದು ಕಾಣುತ್ತಿತ್ತು.

ಲಾರಾರಿಂದ ನನಗೆ ಅವರ ತಾಯಿಯ ಬಗ್ಗೆ ಸಹ ತಿಳಿಯಿತು. ಅವರ ತಾಯಿ ಗ್ರೇಥಾ ಅವರಿಗೆ ಎಂಬತ್ತೈದು ವರ್ಷವಾಗಿತ್ತು. ಅವರು ಡೆನ್ಮಾರ್ಕಿನ ಮತ್ತೊಂದು ದ್ವೀಪ ಜಟಲೆಂಡ್‌ನ ಒಂದು ಚಿಕ್ಕ ನಗರ ಸೋಂಡರಬರ್ಗ್‌ನಲ್ಲಿ ಒಂಟಿಯಾಗಿರುತ್ತಿದ್ದರು. 'ಫಿಲಿಪ್‌ಗೆ ತಾಯಿಯ ಬಗ್ಗೆ ವಿಶೇಷ ಆಸಕ್ತಿ ಇರಲಿಲ್ಲ. ಅವನು ತಾಯಿಗೆ ಫೋನ್ ಸಹ ಮಾಡುತ್ತಿರಲಿಲ್ಲ. ಮೊದಲ ಹೆಂಡತಿ ಅನಾರೋಗ್ಯದಿಂದಿದ್ದು, ಅದೊಂದು ದಿನ ಇಹಲೋಕವನ್ನು ತ್ಯಜಿಸಿದಳು... ಫಿಲಿಪ್ ತನ್ನದೇ ಆದ ಸಮಸ್ಯೆಗಳೊಂದಿಗೆ ಸೆಣಸಾಡುತ್ತಿದ್ದ. ವಿಷಾದದಲ್ಲೂ ಸಿಲುಕಿರುತ್ತಿದ್ದ. ಆ್ಯಂಟಿಡಿಪ್ರೆಸೆಂಟ್ ಔಷಧಿಗಳನ್ನು ತಿನ್ನುತ್ತಾನೆ', ಲಾರಾ ಬಡಬಡಿಸುತ್ತಾ ನನಗೆ ಹೇಳುತ್ತಿದ್ದರು, 'ನನ್ನ ಮನೆ ನಿನಗೆ ತುಂಬಾ ವ್ಯವಸ್ಥಿತವಾಗಿರುವುದು ಕಾಣಬರುತ್ತದೆ, ಅವನ ಮನೆ ಇದಕ್ಕೆ ವಿರುದ್ಧವಾಗಿ ಅವ್ಯವಸ್ಥೆಯಿಂದಿರುತ್ತದೆ. ನಾನೇ ಅವನ ಮನೆಗೆ ಹೋಗಿ ಅವನ ಮನೆಯನ್ನು ಸ್ವಚ್ಛ ಮಾಡುತ್ತೇನೆ!' ಲಾರಾ ತಾಯಿಯ ಜವಾಬ್ದಾರಿ ಸಹ ಹೊರಬೇಕಿತ್ತು. ಲಾರಾ ವಾಸ್ತವವಾಗಿ ತನ್ನ ತಾಯಿ ಮತ್ತು ಸಹೋದರನಿಗೆ ಊರುಗೋಲಿನಂತಿದ್ದರು.

ಲಾರಾ ನನಗೆ ತಮ್ಮ ವೈಯಕ್ತಿಕ ಜೀವನದ ವಿಷಯಗಳನ್ನೂ ಹೇಳಿದರು. ಅವರ ಜೀವನದಲ್ಲಿ ಒಬ್ಬೊಬ್ಬರಾಗಿ ಮೂವರು ಬಂದರು. ಯಾರೊಂದಿಗೂ ಅವರು ಹೆಚ್ಚು ದಿನ ಇರದಾದರು. ಲಾರ್ಸ್‌ರ ತಂದೆಯೊಂದಿಗೇ ಅವರ ವಿವಾಹ

